
ಪುಸ್ತಕ ಪರಿಚಯ

# ‘ಏಕಾಂಗಿ ಕವಯಿತ್ರಿಯ ಪ್ರವಾಸದ ಡೈರಿ’ (೧೯೩೮)




**ಕೃತಿ:** ಏಕಾಂಗಿ ಕವಯಿತ್ರಿಯ ಪ್ರವಾಸದ ಡೈರಿ (1938)
**ಸಂಪಾದಕರು:** ಡಾ.ಶಾಂತಾನಾಗರಾಜ್
**ಪ್ರಕಾಶನ :** ಯಾಜಿ ಪ್ರಕಾಶನ, ‘ಭೂಮಿ’, ನಾಹರ್ ಕಾಲೋನಿ, ಎಂ.ಪಿ.ಪ್ರಕಾಶ ನಗರ, ಹೊಸಪೇಟೆ 583201
**ಫೋ:** 7019637741, 9449922800
**ಪುಟ:** 82 **ಬೆಲೆ:** 120/-

ಹರಿಭಕ್ತಿಯನ್ನು ಸಾಮಾನ್ಯ ಜನಕ್ಕೆ ಪ್ರಸಾರ ಮಾಡುವಲ್ಲಿ ದಾಸಪಂಥ ಗಣನೀಯ ಕೊಡುಗೆ ನೀಡಿದೆ. ದಾಸದೀಕ್ಷೆ ಪಡೆದು, ಮನೆ ತೊರೆದು, ತಾಳ, ತಂಬೂರಿ, ಗೋಪಾಳಬುಟ್ಟಿ ಹಿಡಿದು, ಕಾಲಿಗೆ ಗೆಜ್ಜೆಕಟ್ಟಿ ಕೀರ್ತನೆಗಳನ್ನು ಅಭಿನಯ ಪೂರ್ವಕವಾಗಿ ಹಾಡುತ್ತಾ, ಮನೆಮನೆಗೆ ಹೋಗಿ, ಅಂಗಳದಲ್ಲಿ ನಿಂತು ಜನರ ಯೋಗಕ್ಷೇಮ ವಿಚಾರಿಸಿ, ಅವರನ್ನು ಸಜ್ಜನಿಕೆಯ ಸನ್ಮಾರ್ಗಕ್ಕೆ ತಂದು, ಅವರು ಕೊಟ್ಟದ್ದನ್ನು ಪ್ರಸಾದವೆಂದು ತೆಗೆದುಕೊಂಡು ಜೀವನ ನಡೆಸುವ ಮಧುಕರ ವೃತ್ತಿ ದಾಸರದು. ಅಪರಿಚಿತ ಜನರ ನಡುವೆ ಏಕಾಂಗಿಯಾಗಿ ಸುತ್ತುತ್ತಾ ಭಿಕ್ಷೆ ಬೇಡಿ ಜೀವನ ಸಾಗಿಸುವುದು ಕಷ್ಟವಾದ್ದರಿಂದ, ಮಹಿಳೆಯರು ಹರಿದಾಸರಾಗುವುದು ವಿರಳ.

ಇಂತಹ ವಿರಳರಲ್ಲಿ ಸ್ವಾತಂತ್ರ್ಯಪೂರ್ವದ ದಶಕಗಳಲ್ಲಿ ಹುಟ್ಟಿ ಬಾಳಿದ ಅಂಬಾಬಾಯಿಯವರು (೧೯೦೨-೧೯೪೩) ಕರ್ನಾಟಕದ ಏಕೈಕ ಉದಾಹರಣೆ. ಪ್ರತಿಭಾನ್ವಿತೆಯಾದ ಇವರು ಗೋಪಾಲಕೃಷ್ಣ ವಿಠಲ ಅಂಕಿತವುಳ್ಳ ೩೦೦ ಕೀರ್ತನೆಗಳಿಂದ ಹಿಡಿದು ರಾಮಕಥಾಮೃತದಂತಹ ೧೭ ಕಾವ್ಯರಚನೆ ಮಾಡಿದರು, ಜನ ಕೇಳಿದಾಗ ಹರಿಕಥೆಯನ್ನೂ ಮಾಡುತ್ತಿದ್ದರು. ಶುದ್ಧ ಭಾಷೆ, ಲಯಜ್ಞಾನ, ವಿವಿಧ ಛಂದಸ್ಸುಗಳ ಬಳಕೆ ಇವರ ಕೃತಿಗಳ ವೈಶಿಷ್ಟ್ಯವಾಗಿದ್ದು, ಇಂದಿಗೂ ಜನಪ್ರಿಯವಾಗಿವೆ. ನೂರು ವರ್ಷಗಳ ಹಿಂದೆ ದೇವರಾಯನದುರ್ಗದ ತಂದೆ ಮುದ್ದುಮೋಹನದಾಸರಿಂದ (ಸುಬ್ಬರಾಯದಾಸ) ದೀಕ್ಷೆ ಪಡೆದು, ಒಬ್ಬಳೇ ಊರೂರು ತಿರುಗಿದ, ಕೇಶಮುಂಡನ ಮಾಡಿಸಿಕೊಂಡ ಮಾಧ್ವ ಬ್ರಾಹ್ಮಣ ವಿಧವೆಯ ರೋಮಾಂಚಕ ಎನ್ನಿಸುವ ವಿಜಯ ಯಾತ್ರೆಯ ದಿನಚರಿಯನ್ನು ಅಂಬಾಬಾಯಿಯವರ ಬಗ್ಗೆ ಸಂಶೋಧನೆ ನಡೆಸಿ, ಡಾಕ್ಟರೇಟ್ ಪಡೆದ ಶಾಂತಾ ನಾಗರಾಜ್ ತಮ್ಮ ವಿವರಣೆಗಳೊಂದಿಗೆ ಹೊರತಂದಿದ್ದಾರೆ.

ಮಡಿಹೆಂಗಸಾದ್ದರಿಂದ ಅಪರಿಚಿತರ ಮನೆಗಳಲ್ಲಿ ಕಠೋರ ಕಟ್ಟುಪಾಡುಗಳಲ್ಲಿ ಅದರಲ್ಲೂ ಮುಟ್ಟಾದಾಗ ದಿನ ಕಳೆಯುವ ಹಿಂಸೆ. ಬೇಡಿ ತಂದ ಅಕ್ಕಿಯನ್ನು ಕೊಟ್ಟ ಮೇಲೂ ಊಟಕ್ಕೆ ಕರೆಯದ ಮಠಗಳು, ಧಾರ್ಮಿಕ ಕೇಂದ್ರಗಳು, ಕತ್ತಲ ಪ್ರಯಾಣ, ಅನಾರೋಗ್ಯ, ವ್ಯಂಗ್ಯದಿಂದ ಇರಿಯುವ ಜನ ಇವೆಲ್ಲವನ್ನೂ ದೈವಚಿತ್ತ ಎಂದು ಧೀರತೆಯಿಂದ ಸಹಿಸುವ ಮನೋಭೂಮಿಕೆ ಮೆಚ್ಚುಗೆ ತರುತ್ತದೆ. ಪುರಂದರ ಕಟ್ಟೆಯನ್ನು ನಿರ್ಮಿಸಿದ್ದು, ಮಳಗಿಯಲ್ಲಿ ಗುರುಕೃಪೆಯಿಂದ ಗೋಪಾಲಕೃಷ್ಣ ವಿಗ್ರಹ ಪಡೆದದ್ದು, ದಾಸಕೂಟದ ಶಾಖೆಯನ್ನು ಪ್ರಾರಂಭಿಸಿದ್ದು, ಅಪಾಯಕ್ಕೆ ಸಿಕ್ಕದೆ ಅಷ್ಟೊಂದು ಊರುಗಳನ್ನು ತಿರುಗಿದ್ದು ಇವೆಲ್ಲ ಅವರದಿಟ್ಟ ಮನೋಭಾವದ ಫಲ. ಭಜನೆ, ಹರಿಕತೆ, ತತ್ತ್ವಜ್ಞಾನ ನಿರೂಪಣೆಗಳಲ್ಲಿ ನಿರ್ಭಿಡೆಯಿಂದ ಸಂವಹನ ಮಾಡುವ ಅಂಬಾಬಾಯಿಗೆ ತನ್ನ ಜ್ಞಾನ ಮೆರೆಸುವ ಹಂಬಲವಿಲ್ಲ. ಸಿಕ್ಕ ದಾನದ ಹಣವನ್ನು ಅದೇ ಊರಲ್ಲಿ ಧಾರ್ಮಿಕ ಕಾರ್ಯಗಳಿಗೆ ನೀಡಿ, ರಿಕ್ತಹಸ್ತೆಯಾಗಿಯೇ ಮುಂದಿನ ಊರಿಗೆ ತೆರಳಬೇಕಾದ ಕಟ್ಟುಪಾಡು. ಅಕ್ಕಮಹಾದೇವಿಯನ್ನು ನೆನಪಿಗೆ ತರುವ ಧೈರ್ಯ, ಕಷ್ಟಸಹಿಷ್ಣುತೆ, ಆಧ್ಯಾತ್ಮಿಕ ಜ್ಞಾನ, ಕೇವಲ ಮೂರು ತಿಂಗಳಲ್ಲಿ ಮಹಾಕಾವ್ಯ ರಚಿಸುವ ಪ್ರತಿಭೆ ಇವರದು.

ಪತಿ ಹನುಮಂತಾಚಾರ್ಯರು ತೀರಿಕೊಂಡ ಬಳಿಕ ಅವರ ಮನೆಯವರು ಇವರನ್ನು ಕೆಟ್ಟ ಕಾಲ್ಗುಣದವಳು ಎಂದು ನಿಂದಿಸಿ, ನಿರ್ಗತಿಕಳಾಗಿಸಿ ಹೊರದೂಡಿದ ಬಳಿಕವೂ, ದೈವಚಿತ್ತ ಎಂದು ಸಹಿಸಿ, ಅವರಿಂದಲೇ ಮುಂದೆ ಗೋಪಾಲಕೃಷ್ಣ ಮೂರ್ತಿಯನ್ನು ಸೌಹಾರ್ದದಿಂದ ಪಡೆಯುತ್ತಾರೆ. ತಾನು ಎಲ್ಲ ಕಟ್ಟುಪಾಡುಗಳನ್ನು ಆಚರಿಸಿದರೂ, ಇತರರಿಗೆ ಹಾಗೆ ಮಾಡಲು ಹೇಳರು. ವ್ಯಂಗ್ಯ, ಚುಚ್ಚುಮಾತುಗಳಿಗೆ ಪ್ರತಿ ಹೇಳದೆ ತಮ್ಮ ಕರ್ತವ್ಯವನ್ನು ಪಾಲಿಸಿ, ದುರ್ಭರ ಪ್ರಸಂಗಗಳನ್ನು ಎದುರಿಸಿ, ಕೃಷ್ಣ ಕಾಪಾಡಿದ ಎಂದು


ಬರೆದುಕೊಳ್ಳುತ್ತಾರೆ. ಆ ಸ್ವಾತಂತ್ರ್ಯಪೂರ್ವಕಾಲದ ಸಾಮಾಜಿಕ ತಲ್ಲಣಗಳನ್ನು ಉಲ್ಲೇಖಿಸದೆ, ಭಕ್ತಿ, ಮಾಧ್ವ ತತ್ತ್ವಜ್ಞಾನಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುವುದಕ್ಕೆ ಅವರ ಜೀವನದ ಗುರಿಯೇ ಹರಿಭಕ್ತಿ ಪ್ರಸಾರವಾಗಿರುವುದು ಕಾರಣ. ಅವರ ಸಾವೂ ತೀರಾ ವಿಶಿಷ್ಟವೇ–ನದಿಯಲ್ಲಿ ಸ್ನಾನ ಮಾಡುವಾಗ ಯಾರಿಗೂ ತಿಳಿಯದಂತೆ ತೇಲಿ ಹೋಗಿರಬೇಕು.

ಅಂಬಾಬಾಯಿಯವರಿಗೆ ಹೋಲಿಸಬಹುದಾದವರು, ಶಾಂತಿಯ ಸಂದೇಶವನ್ನು ಹರಡಲು ಅಮೆರಿಕಾದ ಆದ್ಯಂತ ೨೫೦೦೦ ಮೈಲು ಕಾಲ್ನಡಿಗೆಯಲ್ಲೆ ಏಕಾಂಗಿಯಾಗಿ ಸಂಚರಿಸಿದ ಶಾಂತಿಯಾತ್ರಿ ಅಥವಾ ಪೀಸ್ ಪಿಲ್‌ಗ್ರಿಮ್ (ಮಿಲ್‌ಡ್ರೆಡ್ ಲಿಸೆಟ್ ನಾರ್ಮನ್) (೧೯೦೮–೧೯೮೧) ಎಂಬ ಆಧ್ಯಾತ್ಮಿಕ ಸಾಧಕಿ. ಮಾನಸಿಕ ಸಿದ್ಧತೆಗಾಗಿ ಕೆಲವು ವರ್ಷಗಳನ್ನು ಕಳೆದು ೧೯೫೩ರಿಂದ ತಾವು ತೀರಿಕೊಳ್ಳುವವರೆಗೂ ಏಳು ಬಾರಿ ಅಮೆರಿಕಾವನ್ನು ಸುತ್ತಿದರು. ಶಾಂತಿಗಾಗಿ ತಮ್ಮನ್ನು ಅರ್ಪಿಸಿಕೊಂಡು, ಇತರರಿಗೆ ಪ್ರೇರಣೆ ನೀಡುವ ಸಂದೇಶಗಳನ್ನು ಬಿಟ್ಟುಹೋಗಿರುವ ಶಾಂತಿಯಾತ್ರಿಯನ್ನು ನೆನೆಸಿಕೊಳ್ಳಲು, ಪ್ರಚಾರ ಮಾಡಲು ಸಂಸ್ಥೆಗಳೇ ಇವೆ.

ಆದರೆ ಮರೆತೇ ಹೋಗಿದ್ದ ಅಂಬಾಬಾಯಿಯವರನ್ನು ನೆನೆಸಿಕೊಂಡದ್ದು ಅವರ ಬಗ್ಗೆ ಡಾಕ್ಟರೇಟ್ ಮಾಡಿದ ಪ್ರಸಿದ್ಧ ಸಾಹಿತಿ ಶ್ರೀಮತಿ ಶಾಂತಾನಾಗರಾಜ್ ಅವರು. ಕಿತ್ತುಹೋದ, ಕೇವಲ ೧೮ ಪುಟಗಳಿರುವ, ಏಕಾಂಗಿ ಕವಯಿತ್ರಿಯ ಪ್ರವಾಸದ ಡೈರಿಯಲ್ಲಿ ೮೩ ದಿನಗಳ ದಿನಚರಿಯಲ್ಲಿ ಸಂಪಾದಕರು ಅಂಬಾಬಾಯಿಯವರ ಜೀವನ ಸಾಧನೆಗಳ ಪರಿಚಯವನ್ನು ತಮ್ಮ ವಿವರಣೆಗಳಿಂದ ಸ್ಫುಟಗೊಳಿಸಿದ್ದಾರೆ. ದಾಸದೀಕ್ಷೆಯಾದ ಅನಂತರ ತಿರುಗಾಟದ ಬದುಕಿನ ಎಂಟೇ ವರ್ಷದಲ್ಲಿ ೩೦೦ಕ್ಕಿಂತ ಹೆಚ್ಚು ಕೀರ್ತನೆಗಳು, ಮೂರು ತಿಂಗಳಲ್ಲಿ ರಚಿಸಿದ ಮಹಾಕಾವ್ಯ ಮತ್ತು ಹತ್ತಾರು ದೀರ್ಘ ಕೃತಿಗಳನ್ನು ರಚಿಸಿದ ಅಂಬಾಬಾಯಿ ಅಸಾಮಾನ್ಯ ಕವಯಿತ್ರಿಯೇ ಸರಿ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈಕೆಯ ಉಲ್ಲೇಖವೇ ಇಲ್ಲ.

*— ಡಾ. ಹೆಚ್.ಪಾಂಡುರಂಗ ವಿಠಲ*

## ಯುವಚೇತನ



## ಭಾವನೆಯ ಹನಿಗಳು

- ಹಿಂದೂಧರ್ಮದ ಮೂರು ಮುಖ್ಯವಾದ ನಂಬಿಕೆಗಳೆಂದರೆ, ದೇವರಲ್ಲಿ ನಂಬಿಕೆ, ವೇದದಲ್ಲಿ ನಂಬಿಕೆ, ಕರ್ಮದಲ್ಲಿ ನಂಬಿಕೆ.
- ವೇದವನ್ನು ವಿಶದವಾಗಿ ಓದಿದರೆ ಅಲ್ಲಿ ಒಂದು ಸಾಮರಸ್ಯವಿರುವುದು ನಮಗೆ ಕಾಣುವುದು. ಹಿಂದೂಧರ್ಮದಲ್ಲಿ ಒಬ್ಬ ಒಂದು ಸತ್ಯದಿಂದ ಮತ್ತೊಂದು ಸತ್ಯಕ್ಕೆ ಪ್ರಯಾಣ ಮಾಡುವನು. ಸಣ್ಣ ಸತ್ಯದಿಂದ ದೊಡ್ಡ ಸತ್ಯದೆಡೆಗೆ ಪ್ರಯಾಣ ಮಾಡುವನು. ಅವನೆಂದಿಗೂ ಅಸತ್ಯದಿಂದ ಸತ್ಯಕ್ಕೆ ಹೋಗುವುದಿಲ್ಲ.
- ಬದಲಾಗದೆ ಇರುವವನು ದೇವರೊಬ್ಬನೇ. ಸಮಾಜ ಬದಲಾಗುತ್ತದೆ. ಜಗತ್ ಎಂದರೆ ಚಲಿಸುತ್ತಿರುವುದು ಎಂದು ಅರ್ಥ. ದೇವರೊಬ್ಬನೇ ಅಚಲನು.
- ಪ್ರಪಂಚದ ಶ್ರೇಷ್ಠತಮ ದೃಶ್ಯಗಳನ್ನು ಹಿಮಾಲಯದ ಮೇಲಿನಿಂದ ನೋಡಬಹುದು. ಒಬ್ಬ ಅಲ್ಲಿ ಕೆಲವು ಕಾಲವಿದ್ದರೆ ಮುಂಚೆ ಅವನೆಷ್ಟೇ ಚಂಚಲನಾಗಿದ್ದರೂ ಅವನಿಗೆ ಸ್ವಲ್ಪ ಶಾಂತಿ ದೊರಕುವುದರಲ್ಲಿ ಸಂದೇಹವಿಲ್ಲ.
- ಸಾಧುಸಂಗ ಒಳ್ಳೆಯದು. ನೀವು ಸಾಧುಗಳ ಸಮೀಪಕ್ಕೆ ಹೋದರೆ ಸಾಕು, ಪ್ರಯತ್ನಿಸದೇ ಇದ್ದರೂ ಸುತ್ತಲೂ ಪವಿತ್ರತೆ ತುಂಬಿ ತುಳುಕುವುದನ್ನು ನೋಡುವಿರಿ.
- ಬುದ್ಧನು ದೇವರ ವಿಷಯದಲ್ಲಿ ಏನನ್ನೂ ಹೇಳಲಿಲ್ಲ. ಆದರೆ ನಮ್ಮ ಧರ್ಮಗಳೆಲ್ಲ ದೇವರಿದ್ದಾನೆಂದು ಸಾರುವುವು. ವೇದಗಳು ಸಾಕಾರ ಮತ್ತು ನಿರಾಕಾರ ದೇವರನ್ನು ಹೇಳುವುವು. ಗೀತೆಯಲ್ಲೆಲ್ಲ ದೇವರ ವಿಷಯವಿದೆ. ದೇವರಿಲ್ಲದೆ ಹಿಂದೂಧರ್ಮವೇ ಇಲ್ಲ. ದೇವರಿಲ್ಲದೆ ವೇದಗಳೇ ಇಲ್ಲ. ಮುಕ್ತಿಗೆ ಇದೊಂದೇ ಮಾರ್ಗ. ಸಂನ್ಯಾಸಿಗಳು ಈ ಕೆಳಗಿನ ಭಾವನೆಗಳನ್ನು ಹಲವು ವೇಳೆ ಉಚ್ಚರಿಸಬೇಕು: ‘‘ನಾನು ಮುಕ್ತಿಗಾಗಿ ದೇವರನ್ನು ಆರಾಧಿಸುತ್ತೇನೆ. ಯಾರು ಈ ಪ್ರಪಂಚವನ್ನು ಸೃಷ್ಟಿಸಿದನೋ ಮತ್ತು ಯಾರು ವೇದವನ್ನು ಕೊಟ್ಟನೋ ಅವನಲ್ಲಿ ಶರಣಾಗುತ್ತೇನೆ.’’
- ಪವಿತ್ರಾತ್ಮನಾಗಲು ಸಾಧನೆ ಮಾಡುತ್ತಾ ನಾಶವಾದರೂ ಚಿಂತೆಯಿಲ್ಲ; ಸಾವಿರಾರು ವೇಳೆ ಮೃತ್ಯುವನ್ನು ಬೇಕಾದರೆ ಆಲಿಂಗಿಸು. ಎಂದಿಗೂ ನಿರಾಶನಾದಿರು. ಅಮೃತ ಸಿಗಲಿಲ್ಲವೆಂದು ವಿಷಪಾನ ಮಾಡುವುದಕ್ಕೆ ಆಗುವುದಿಲ್ಲ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು. ೩೮೫–೪೦೨)*